ಅನುಮೋದನೆಯನ್ನು ಇನ್ನೂ ಪಡೆಯಬೇಕಾಗಿರುತ್ತದೆ

ಇ) ಶಿವನಿ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಗೆ ಪ್ರಸಕ್ತ ಸಾಲಿನ (2001-02) ಆಯವ್ಯಯದಲ್ಲಿ 270 ಲಕ್ಷ ರೂ ಗಳನ್ನು ಒದಗಿಸಲಾಗಿದೆ ಈ ವಿದ್ಯುತ್ ವಿತರಣಾ ಕೇಂದ್ರದ ನಿರ್ಮಾಣ ಕಾರ್ಯವನ್ನು "ಟರ್ನ್ ಕೀ" ಆಧಾರದಲ್ಲಿ ನಿರ್ವಹಿಸಲು ತೀರ್ಮಾನಿಸಿದ್ದು ಈ ಕಾಮಗಾರಿಯ ನಿರ್ವಹಣೆಯನ್ನು ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದೆ ಈ ಕೆಲಸವು ಪ್ರಾರಂಭದ ಹಂತದಲ್ಲಿದೆ

ಲಕ್ಕವಳ್ಳಿ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಯನ್ನೂ ಸಹ "ಟರ್ನ್ ಕೀ' ಆಧಾರದಲ್ಲಿ ನಿರ್ವಹಿಸಲು ತೀರ್ಮಾನಿಸಿದ್ದು ಟೆಂಡರ್‌ನ್ನು ಆಹ್ವಾನಿಸಲಾಗಿದೆ ಈ ಕಾಮಗಾರಿಯನ್ನು ಆಯ್ಕೆಯಾದ ಗುತ್ತಿಗೆದಾರರಿಗೆ ವಹಿಸಿಕೊಟ್ಟ ನಂತರ ನಿರ್ಮಾಣ ಕೆಲಸವನ್ನು ಪ್ರಾರಂಬಿಸಲಾಗುವುದು

ನೇರಲೆಕೆರೆ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಗೆ ಪ್ರಸಕ್ತ ಸಾಲಿನ (2001-02) ಆಯವ್ಯಯದಲ್ಲಿ 5 ಲಕ್ಷ ರೂ ಗಳನ್ನು ಪೂರ್ವಭಾವಿ ಕೆಲಸಗಳಿಗಾಗಿ ಒದಗಿಸಲಾಗಿದೆ ಈ ಕಾಮಗಾರಿಯ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ ಈ ಕಾಮಗಾರಿಗೆ ನಿಗಮದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದ ನಂತರ, ನಿರ್ಮಾಣ ಕಾರ್ಯದ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 165(455)

**ಸದಸ್ಯರ ಹೆಸರು ಶ್ರೀ ಪಾಟೀಲ್ ಜೆ ಟಿ (ಬೀಳಗಿ)**

**ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಆ ಪಾಟೀಲ್(ಇಂಧನ ರಾಜ್ಯ ಸಚಿವರು)**

## ಪ್ರಶ್ನೆ

ಅ) ಕಳೆದ 3 ವರ್ಷಗಳಲ್ಲಿ ಪ್ರತಿ ವರ್ಷ ಇರುವ ವಿದ್ಯುತ್ ಉತ್ಪಾದನೆ ಎಷ್ಟು ವಿದ್ಯುತ್‌ನ ಬೇಡಿಕೆ ಎಷ್ಟು?

ಆ) ಕಳೆದ 3 ವರ್ಷಗಳಲ್ಲಿ ಹೊಸದಾಗಿ ಎಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗಿದೆ? (ವಿವರ ಕೊಡುವುದು)

ಇ) ಇನ್ನು ಎಷ್ಟು ವರ್ಷಗಳಲ್ಲಿ ವಿದ್ಯುತ್ ಬೇಡಿಕೆ ಸಂಪೂರ್ಣವಾಗಿ ಪೂರೈಕೆಯಾಬಹುದು?

## ಉತ್ತರ

ಅ) ಕಳೆದ ಮೂರು ವರ್ಷಗಳಲ್ಲಿ ಪ್ರತಿ ವರ್ಷದ ವಿದ್ಯುತ್ ಲಭ್ಯತೆ ರಾಜ್ಯದಲ್ಲಿ ಉತ್ಪಾದನೆ, ನರೆ ರಾಜ್ಯಗಳಿಂದ ಆಮದು ಕೇಂದ್ರ ಸ್ಥಾವರದಿಂದ ಒರುವ ರಾಜ್ಯದ ಪಾಲು ಸ್ವಂತ ವಿದ್ಯುತ್ ಉತ್ಪಾದಕರ ಕೊಡುಗೆ ನೇರಿದಂತೆ) ಹಾಗೂ ವಿದ್ಯುತ್ ಬೇಡಿಕೆಯ ಪ್ರಮಾಣ ಈ ಕೆಳಕಂಡಂತಿದೆ

| ಕ್ರ ಸಂ | ವಿವರ | ವರ್ಷ | | |
|---|---|---|---|---|
| | | 1998-99 | 1999-00 | 2000-01 |
| 1 | ವಿದ್ಯುತ್ ಲಭ್ಯತೆ (ದಶಲಕ್ಷ ಯೂನಿಟ್‌ಗಳಲ್ಲಿ) | 22746 | 26118 | 27700 |
| 2 | ವಿದ್ಯುತ್ ಬೇಡಿಕೆ (ದಶಲಕ್ಷ ಯೂನಿಟ್‌ಗಳಲ್ಲಿ) | 27000 | 28500 | 30000 |

ಆ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ವಿದ್ಯುತ್ ಜಾಲಕ್ಕೆ ಹೊಸದಾಗಿ ಸೇರ್ಪಡೆಯಾದ ವಿದ್ಯುತ್ ಉತ್ಪಾದನಾ ಸ್ಥಾವರಗಳ ಸಾಮರ್ಥ್ಯ ಹಾಗೂ ಇವುಗಳೂ ಸೇರಿದಂತ ಒಟ್ಟಾರೆ ಉತ್ಪಾದಿಸಿದ ವಿದ್ಯುತ್ ಪ್ರಮಾಣದ ವಿವರಗಳು ಕೆಳಕಂಡಂತಿವೆ

| ಕ್ರ ಸಂ | ವರ್ಷ | ಸೇರ್ಪಡೆಯಾದ ವಿದ್ಯುತ್ ಉತ್ಪಾದನಾ ಸಾಮರ್ಥ್ಯ(ಮೆಗಾ ವ್ಯಾಟ್‌ಗಳಲ್ಲಿ) | ಒಟ್ಟಾರೆ ವಿದ್ಯುತ್ ಉತ್ಪಾದನ (ಹೊಸ ಉತ್ಪಾದನಾ ಘಟಕಗಳೂ ಸೇರಿದಂತೆ) (ದಶಲಕ್ಷ ರೂ ಗಳಲ್ಲಿ) |
|---|---|---|---|
| 1 | 1998-99 | 467 | 17066 |
| 2 | 1999-00 | 542 60 | 20901 |

3 2000-01 166 50 21985

ಇ) ಸರ್ಕಾರದ ನೀತಿಯಂತೆ ವಿದ್ಯುತ್ ವಲಯದಲ್ಲಿ ನ್ಯಾಯಸಮ್ಮತ ಹಾಗೂ ನಿರಿಸಮಾನವಾಗಿ ಜನತೆಗೆ ವಿದ್ಯುತ್ ಪೂರೈಸಲು ಸುಮಾರು 2010ರ ಹೊತ್ತಿಗೆ ಸಾಧ್ಯವಾಗಬಹುದೆಂದು ನಿರೀಕ್ಷಿಸಲಾಗಿದೆ

ರಾಜ್ಯದಲ್ಲಿ ವಿದ್ಯುತ್ ಸರಬರಾಜಿನಲ್ಲಿ ಕೊರತೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 166(505)

**ಸದಸ್ಯರ ಹೆಸರು ಶ್ರೀ ಬಚ್ಚೇಗೌಡ ಬಿ ಎನ್ (ಹೊಸಕೋಟೆ)**

**ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಪಾಟೀಲ್(ಇಂಧನ ರಾಜ್ಯ ಸಚಿವರು)**

## ಪ್ರಶ್ನೆ

ಅ) ರಾಜ್ಯದಲ್ಲಿ ಈಗ ಹಾಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್ ಪ್ರಮಾಣವೆಷ್ಟು?

ಆ) ಕೇಂದ್ರದಿಂದ ಮತ್ತು ಹೊರ ರಾಜ್ಯಗಳಿಂದ ಎಷ್ಟು ವಿದ್ಯುತ್ ಪಡೆಯಲಾಗುತ್ತಿದೆ ಹಾಗಿದ್ದಲ್ಲಿ ಯಾವ ದರದಲ್ಲಿ ಪಡೆಯಲಾಗುತ್ತಿದೆ?

ಇ) ರಾಜ್ಯದಲ್ಲಿ ತಲದೋರುತ್ತಿರುವ ವಿದ್ಯುತ್ ಕೊರತೆಯ ಪ್ರಮಾಣ ಎಷ್ಟು ಇದನ್ನು ನೀಗಿಸಲು ತೆಗೆದುಕೊಂಡ ಕ್ರಮಗಳೇನು?

ಈ) ರೈತರಿಗೆ ನೀಡುತ್ತಿರುವ ಉಚಿತ ವಿದ್ಯುತ್ ಪ್ರಮಾಣ ಎಷ್ಟು? (ವಿವರ ನೀಡುವುದು)

## ಉತ್ತರ

ಅ) ರಾಜ್ಯದಲ್ಲಿ ಹಾಲಿ ಉತ್ಪಾದನೆಯಾಗುತ್ತಿರುವ ದೈನಿಕ ವಿದ್ಯುತ್ ಪ್ರಮಾಣ 45 033 ಮಿ ಯೂ

ಆ) ಕೇಂದ್ರ ವಿದ್ಯುದಾಗಾರ ಮತ್ತು ಇತರ ವಲಯಗಳಿಂದ ಪಡೆಯಲಾಗುತ್ತಿರುವ ವಿದ್ಯುತ್ ಪ್ರಮಾಣ 27 603 ಮಿ ಯೂ

ಹೊರ ರಾಜ್ಯಗಳಿಂದ ಮತ್ತು ಐ ಪಿ ಪಿ ಗಳಿಂದ ಪಡೆಯಲಾಗುತ್ತಿರುವ ವಿದ್ಯುತ್